200 ರೂಪಾಯಿ ಸೂಲವನ್ನು ವಸೂಲ್ಮಾಡುವದಕ್ಕೆ ಸ್ರ 1860ನೇ ಇಸವಿ 27ನೇ ಆಕ್ಟ್ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಾಚಾರ್ರ ಅರ್ಜಿಯನ್ನು ಸ್ರ 1896ನೇ ಇಸವಿ ಫಿಬ್ರವರಿ ತಿಂಗಳ ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂಬು ಇದರಿಂದ ತಿಳಿಯಪಡಿಸಿ ಇದೆ.

ಸ್ರ 1895ನೇ ಇಸವಿ ಡಿಸೆಂಬರ್ ತಿಂಗಳ 20ನೇ ತಾರೀಖಿನಲ್ಲಿ ಕೋರ್ಟ್ ವೊಹರ್ ನಿಶಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್, ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 1ನೇ ಜನವರಿ 1896.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ವೊರಟ ಕೆತ್ತನೆ ಮಾಡಿ ಆಯಾಯ ಹೋಬಳಿಗಳಿಗೆ ಬಾಜಾದಲ್ಲಿ ತೋರಿಸಿರುವ ಕೋಠಿಗಳಿಗೆ 1896ನೇ ಇಸವಿ ಅಕ್ಟೋಬರ್ ಆಖೈರ್ ವಳಗಾಗಿ ಸಾಗಿಸುವದಕ್ಕೋಸ್ಕರ ದರಖಾಸ್ತುಗಳನ್ನು ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರು 1896ನೇ ಇಸವಿ ಜನವರಿ ತಾರೀಖು 31ರ ವರಗೆ ತೆಗದುಕೊಳ್ಳುತ್ತಾರೆ.

ತಾಲ್ಲೂಕು.	ಹೋಬಳಿ.	ಕೋಠಿ.	ವೊತ್ತ.
ಹುಣಸೂರು	ಬೆಟ್ಟದಪುರ	ಹುಣಸೂರು	50 ಟನ್
ಹೆಗ್ಗಡದೇವನಕೋಟೆ	ಚನ್ನಹಳ್ಳಿ	ಡಿಟೋ	50 ಟನ್
ಗುಂಡ್ಲು	ರಾಘವಾಪುರ	ಶ್ರೀರಂಗಪಟ್ಟಣ	25 ಟನ್
ಚಾಮರಾಜನಗರ	ಸಂತೆಮಾರಹಳ್ಳಿ	ಡಿಟೋ	25 ಟನ್
ಮೈಸೂರು	ಸಿಂದವಳ್ಳಿ	ಡಿಟೋ	25 ಟನ್

2. ತವಾಂ ದರಖಾಸ್ತುಗಳೂ "ಫಲಾನಾ ಕೋಠಿಗೆ ಫಲಾನಾ ಹೋಬಳಿಯಿಂದ ಸಂದಲ್ ಮರಗಳನ್ನ ಕೀಳಿಸಿ ವೊರಟ ಕೆತ್ತನೆಯಿಂದ ಸಾಗಿಸಲು ದರಖಾಸ್ತು" ಯಂಬದಾಗಿ ಮೇಲ್ ವಿಳಾಸ ಬರದು ವೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಬಂದು ಹೋಬಳಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಬಂದು ಹೋಬಳಿಗೂ 50 ರೂಪಾಯಿ ಬೆಲೆಯುಳ್ಳ ಕರ್ನಿಸೀ ನೋಟುಗಲಿ ಯಾ ಪ್ರೋನೋಟುಗಲಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜನವರಿ 31ನೇ ತಾರೀಖಿನಲ್ಲಿ ಹಾಜರು ಇರತಕ್ಕ ದರಖಾಸ್ತುದಾರ್ರ ಯಾದುರಿಗೆ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರಿಂದ ವಜೆಯಲ್ಪಟ್ಟು ಕರ್ನಿಸೀ ನೋಟುಗಳು ವಾವಸು ಮಾಡಲ್ಪಡುವವು.

3. ಪ್ರತಿ ದರಖಾಸ್ತಿನಲ್ಲಿಯೂ ಮರಗಳನ್ನ ಕೀಳಿಸಿ ವೊರಟು ಕತ್ತನೆ ಮಾಡಿಸುವರಕ್ಕೆ ಸರಮರಕ್ಕೆ ಮತ್ತು ತಲೆ ಕೊನೆಗಳಿಗೆ ಪ್ರತ್ಯೇಕವಾಗಿ ದರ ಟನ್ ಬಂದಕ್ಕೆ ಇಷ್ಟೆಂದು ದರ ನಮೂದಿಸಬೇಕು. ಮತ್ತು ಕೋಠಿಗೆ ರವಾನೆಗೆ ದರ ಟನ್ ಬಂದಕ್ಕೆ ಜಂಗಲ್ ಮೈಲಿ ಬಂದಕ್ಕೆ ಇಷ್ಟುದರವೆಂತಲೂ ಮತ್ತು ಹೈ ರೋಡ್ ಮೈಲಿ ಬಂದಕ್ಕೆ ಇಷ್ಟುದರವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯಲ್ಲಾ ಮರಗಳೂ ತಾಯಿಬೇರು ಕಾಲುಬೇರು ಮತ್ತು ಪಕ್ಕದ ಬೇರುಗಳ ವೊಂದಿಗೆ ಕೀಳಿಸಲ್ಪಡಬೇಕು. ಜಮೀನಿನಲ್ಲಿ ಚೆಗ ಇರತಕ್ಕ ಮರಗಳು ಯಾವದೂ ಬಿಡಲ್ಪಡಕೂಡದು. ಮರಗಳ ರೆಂಬೆಗಳು ಕೊಡ್ಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ಬೇರಿನಲ್ಲಿ ಇರತಕ್ಕ ಮಣ್ಣು ಮತ್ತು ಕಲ್ಲುಚನ್ನಾಗಿ ತೆಗಿಯಲ್ಪಡಬೇಕು. ಮರಗಳ ಕಿಪ್ಪೆ ಮತ್ತು ಬಿಳಿ ಚಕ್ಕೆಯನ್ನು ಬಹಳ ಹುಷಾರಿನಿಂದ ಮೊದಲು ಮಚ್ಚುಕತ್ತಿಯಿಂದ ಕೆತ್ತಿ ನಂತರ ವೊಳಗಿನ ಚೆಗು ಸೋಲುಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಚೆಗಿನ ನೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬಿಳಿ ಮರ ಬಿಡಕೂಡದು. ಬುಕಣಿ ಮತ್ತು ಚೆಗ ಇರತಕ್ಕ ಚಕ್ಕೆ ಮರಗಳಜೊತೇಲೇ ಸಾಗಿಸಲ್ಪಡಬೇಕು.

5. ಬಂಮ ಅಂಗುಲಕ್ಕಿಂತ ಜಾಸ್ತಿಯಾಗಿ ಚೆಗವುಳ್ಳ ಕಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ವೊರಟ ಕೆತ್ತನೆ ಮಾಡದೆ ಹಾಗೆಯೇ ಕೋಠಿಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನಿ ಚಾರ್ಜ್ ಮಾತ್ರ ಪಾವತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರು ಪ್ರತಿ ಮಾಹೆಯಲ್ಲೂ ಯಷ್ಟು ವೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ವೊತ್ತವನ್ನ ಖಂಡಿತವಾಗಿ ಕೋಠಿಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರಿಂದ ವೊಕರರ್ಮಾಡಲ್ಪಡುವ ವೆನಾಲಿಟಿಗೆ ಗುರಿಯಾಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಜಾಮೀನು ತರೀಕ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪ್ರತಿ ಬಂದು ಹೋಬಳಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಬಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಷರತ್ತುಗಳ ಮೇರೆ ನಡೆಯಲೂ ತಪ್ಪಿದಲ್ಲಿ ಕೇವಣೀ ವೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಚಲನಾಯಿಸೋಣ, ಕೀಳುವಿಕೆ ವೊರಟ ಕೆತ್ತನೆ ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರು ಮಾಡುವ ರೂಲ್ಸ್ ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿ ಇರತಕ್ಕದ್ದು.

10. ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವಹಕ್ಕೆ ಬದ್ದರಾಗಿರುವದಿಲ್ಲ ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕ್ಷ್ ಸರ್ವೇಟರ್ ಸಾಹೆಬರವರ ಮಂಜೂರಾತಿಸೆ ವಳಪಟ್ಟು ಇರುತ್ತೆ.

11. ವುದ್ದೇಶಿಸುವ ಕಂಟ್ರಾಕ್ಟುದಾರನು ಆಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಬ್ದುಲ್‌ಕರೀಮು, ಡಿಸ್ಟ್ರಿಕ್ಟು ಫಾರೆಸ್ಟ್ ಆಸಫಿರ್.

ಹಾಸನ ಡಿಸ್ಟ್ರಿಕ್ಟು.
ಬೇಲೂರು ತಾಲ್ಲೂಕು.

ಇಸ್ತಿಹಾರ್‌ನಾಮಾ.

ತಾರೀಖು 11ನೇ ಡಿಸೆಂಬರ್ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೇಲೂರು ತಾಲ್ಲೂಕು ಕರಗೂರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ ೧೮೯೬ನೇ ಇಸವಿ ಫಿಬ್ರವರಿ ತಾರೀಖ್ 17ನೇ ಸೋಮವಾರ ಹಗಲು 11 ಘಂಟೆಗೆ ಹಾಸನ ಡೆಪ್ಯುಟಿ ಕಮ್ಮಿಷನರ್ ಹುಜೂರಬಳವರ ಮಂಜೂರಾತಿಗೆ ವಳಪಡಿಸಿ ಬೇಲೂರು ತಾಲ್ಲೂಕು ಅಮಲ್‌ದಾರ್ರ ರೂಬರೂ ಬೇಲೂರು ವೊಕ್ತಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಪ್ರಕ್ರತ್ತು ಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ (25) ರೂಪಾಯಿಗಳ ಮೇರೆ ಆಗುವ ಅಸ್ಸೆಸ್ಟ್‌ಪೈಸ್ ಯಾನೆ ನಿಯಮವಾದ ಸರ್ಕಾರ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಅತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ ಸವಾಲ್ ವೊಬಲಗು (ಅಸ್ಸೆಸ್ಟ್‌ಮೆಸ್) ಕೈಕಿಯಾ ಚವಥಾ ಹಿಸ್ಸೇ ಡಿಪಾಜಿಟ್ ವೊಬಲಗನ್ನು ಹರಾಜು ವೊಬಲಗಿನ ಮೇಲೆ ಕೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ವೊಬಲಗು ಭರ್ತಿಗೆ ಜಪ್ತಿ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಪುರೂ ತೇವಣಿ ವೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಸ್ಸೆಸ್ಟ್‌ಪೈಸ್ ಯಾನೆ ನಿಯಮವಾದ ಸರಕಾರ ಸವಾಲ್ ವೊಬಲಗಿನಲ್ಲಿ ಸರ್ವೇ ಖರ್ಚು ವೊಬಲಗು ಮತ್ತು ಸರಕಾರಕ್ಕೆ ೀನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಖುಷಿಯಲ್ಲಾ ಮನ್ನಾಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ವೊಬಲಗು ಪೈಕಿ ಕೇಕಡ 25 ರೂಪಾಯಿಗಳ ಮೇಲೆ ಆಗುವ ತೇವಣಿ ವೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪುರೂ ಡಿಪಾಜಿಟ್ ವೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕಿ ವೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅತಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಪುರೂ ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಪ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜು ದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೇ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ,		ಷರಾ.
				ವಿಸ್ತೀರ್ಣ.	ಆಕಾರ.	
83	ಹೊಸೂರು ನಂಜುಂಡಪ್ಪನವರು, ಹಾಸನದಲ್ಲಿರುವ ಪಾಟಿ ಗೌಸಿಪಿಯ ಹರ್ದೇಪರೀಸ್ತ ಸಾಹೆಬ್.	ಅರೇಹಳ್ಳಿ ಕಿರಗೂರು ಗ್ರಾಮ.	ಸರ್ವೇ ಮತ್ತು ಪೈಣಿ ನಂಬರ್ 82 ಮತ್ತು ಸರ್ವೇ ನಂ 83 ಬರು 129 ಪಣಿ ಸರ್ವೇ ಹದ್ದಿ	ಎಕರೆ 70 ಗುಂಟೆ 32	..	

ತಿಳುವಳಿಕೆ ಷರಾ,—ಬಂದು ಸರ್ವೇ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಅಳತೇ ಪ್ರಕಾರ ಅಂದಾಜಾ ಎಕರೆ ಮೇಲೆ ಅಸ್ಸೆಸ್ಟ್‌ಪೈಸ್ ವಸೂಲಾದ್ದರಲ್ಲಿ ಕರಾರುವಾಕ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತಿ ಎಕರೆ ಸಂಬಂಧ ಅಸ್ಸೆಸ್ಟ್‌ಪೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜಮೀನ್ ಹಿಡುವಳೀ ದಾರನು ಬದ್ಧವ ಅರ್ಹನಾಗಿರಬೇಕು.